ದೋಷವಿರುವವರು ತಮ್ಮ ದೋಷಗಳನ್ನು ತಮ್ಮ ಮುಂದಿನ ತಲೆಮಾರಿನವರಿಗೆ ವರ್ಗಾಯಿಸುತ್ತಾರೆ. ಸಂತಾನೋತ್ಪತ್ತಿ ಮುಂದುವರೆಯುತ್ತದೆ. ಆದರೆ, ಅಂತಹ ದೇಹಗಳ ರಚನೆಯಲ್ಲಿನ ದೋಷಗಳು ಕೂಡ ಮುಂದುವರೆಯುತ್ತವೆ. ಉದಾಹರಣೆಗೆ, ಐವತ್ತರ ನಂತರ ನಮ್ಮ ದೇಹ ಇವೆಲ್ಲ ಕಾರಣಗಳ ಪ್ರಭಾವದಿಂದ ಆರೋಗ್ಯದ ದೃಷ್ಟಿಯಲ್ಲಿ ಇಳಿಮುಖವಾಗಿ ಸಾಗುತ್ತದೆ. ವಾಸ್ತವ ಹೀಗಿದ್ದರೂ ಮಾರ್ಕೆಟಿಂಗ್‌ನ ಜನರು ಯೌವನವನ್ನು ಮರಳಿ ನೀಡುವ ಆಶ್ವಾಸನೆಗಳನ್ನು ನೀಡುತ್ತ ತಾವು ಬದುಕುತ್ತಾರೆ. ವಯಸ್ಸಾಗುವುದು ಒಂದು ರೀತಿಯ ಕಾಯಿಲೆ, ಅದು ಜೀವನಶೈಲಿಯ ಪರಿಣಾಮ ಎಂದೆಲ್ಲ ಹೇಳುತ್ತಾರೆ. ಆದರೆ ವಂಶ ಪಾರಂಪರ್ಯವಾಗಿ ಬರುವ ಕಾಯಿಲೆಗಳು ಮತ್ತು ವಯಸ್ಸಾಗುವಿಕೆ ಎರಡೂ ಯಾರ ತಪ್ಪೂ ಅಲ್ಲ. ಅತ್ಯಂತ ಸಕ್ರಿಯ ಸ್ಥಿತಿಯಲ್ಲಿ ಬದುಕಲು ಸೃಷ್ಟಿಯ ಪ್ರಕಾರ ನಮ್ಮ ದೇಹ ಪರಿಪೂರ್ಣವೂ ಅಲ್ಲ. ನಮ್ಮ ದೇಹಕ್ಕೆ ಸಾಯುವವರೆಗೆ ಯಶಸ್ವಿಯಾಗಿ ಕೆಲಸ ಮಾಡುವ ಶಕ್ತಿಯಿಲ್ಲ. ಬದುಕಿರುವಾಗಲೂ ದೇಹದ ನೈಸರ್ಗಿಕ ನ್ಯೂನತೆಗಳ ಕಾರಣ ನಾವು ಒಂದು ಮಿತಿಯಲ್ಲೇ ಬದುಕಬೇಕಾಗುತ್ತದೆ.

## ನೈಸರ್ಗಿಕ ಲೋಪದೋಷಗಳು

ಮನುಷ್ಯ ದೇಹದ ಅತ್ಯುತ್ತಮ ರೂಪ ಯಾವುದು? ಉತ್ತಮ ದೇಹದಾರ್ಢ್ಯ ಹೊಂದಿದ ಬಾಡಿ ಬಿಲ್ಡರ್‌ಗಳು, ಹಕ್ಕಿಯಂತೆ ನರ್ತಿಸುವ ಬ್ಯಾಲೆರಿನಾಗಳು, ಜಿಂಕೆಯಂತೆ ನೆಗೆಯುವ ಓಡುವ ಒಲಿಂಪಿಕ್ ಓಟಗಾರರು, ನಿಖರ ಮೈಮಾಟದ ಈಜುಗಾರರು – ಇವರನ್ನೆಲ್ಲ ನೋಡುತ್ತ ಮನುಷ್ಯ ದೇಹದ ಅತ್ಯುತ್ತಮ ರೂಪು ಎಂದರೆ ಇದೇ ಇರಬೇಕು ಎಂದು ನಿರ್ಧರಿಸುತ್ತೇವೆ. ಆ ರೂಪ ಪಡೆಯಲು ದೇಹವನ್ನು ಮಿತಿ ಮೀರಿ ದುಡಿಸಲು ಹೆಣಗುತ್ತೇವೆ. ಈ ಪ್ರಯತ್ನದಲ್ಲಿ ಯಶಸ್ವಿಯಾದರೆ ಅದು ದಾಖಲೆಯಾಗುತ್ತದೆ; ಸಾಧನೆಯಾಗುತ್ತದೆ. ಈ ಎಲ್ಲ ಸಂದರ್ಭಗಳಲ್ಲಿ ನಮ್ಮ ದೇಹದ ರಚನೆ ಮತ್ತು ಮಿತಿಗಳನ್ನು ನಾವು ಅದರ ಮಿತಿಗಳ ಗೆರೆಯಿಂದ ಬಹುದೂರಕ್ಕೆ ಎಳೆದು, ನಮ್ಮ ದೇಹ ಹೇಗೆ ಈ ಹೊಸ ಪರಿಸರಕ್ಕೆ ಹೊಂದಿಕೊಳ್ಳುತ್ತದೆ ಎಂಬುದನ್ನು ಅಧ್ಯಯನ ಮಾಡುತ್ತೇವೆ. ನಮ್ಮ ದೇಹಕ್ಕಿರುವ ಪುಟಿದೇಳುವ ಶಕ್ತಿಯನ್ನು ಕಂಡು ಬೆರಗಾಗುತ್ತೇವೆ. ಅದರ ಜೊತೆಯಲ್ಲೇ ಯಾವ ತಡೆಗಳು ನಮ್ಮನ್ನು ಒಂದು ರೀತಿಯಲ್ಲಿ ಮಿತಗೊಳಿಸುತ್ತವೆ ಎಂದು ಅರ್ಥ ಮಾಡಿಕೊಳ್ಳುತ್ತ ಸಾಗುತ್ತೇವೆ. ಅವುಗಳನ್ನು ಒಂದೊಂದಾಗಿ ನೋಡುತ್ತಾ ಹೋಗೋಣ.

## ನಮ್ಮ ಕಣ್ಣುಗಳು

ಎಲ್ಲ ಕಾವ್ಯಾತ್ಮಕ ಬಣ್ಣನೆಗಳನ್ನು ಬದಿಗಿಟ್ಟು ಕಣ್ಣಿನ ರಚನೆಯನ್ನು ಅಧ್ಯಯನ ಮಾಡಿದರೆ, ಪ್ರಕೃತಿ ಮಾಡಿದ ಕೆಲವು ದೊಡ್ಡ ತಪ್ಪುಗಳು ನಮ್ಮ ಅರಿವಿನ ಕಣ್ಣಿಗೆ ಕಾಣುತ್ತವೆ.

ಅಮೆರಿಕ ಮತ್ತು ಯೂರೋಪಿನ ಶೇ.30–40 ಜನರಲ್ಲಿ 'ಸಮೀಪ ದೃಷ್ಟಿ'ಯ ಸಮಸ್ಯೆಯಿದೆ. ಏಷ್ಯಾದಲ್ಲಿ ಇದೇ ಸಮಸ್ಯೆ 40ರ ವಯಸ್ಸಿನವರಲ್ಲಿ ಶೇ.70ರಷ್ಟು ಅಧಿಕವಾಗಿದೆ. ಕನ್ನಡಕವೋ, ಕಾಂಟಾಕ್ಟ್ ಲೆನ್ಸೋ ಇಲ್ಲದಿದ್ದರೆ ಅವರಿಗೆ ತಮ್ಮಿಂದ ಕೆಲವೇ ಕೆಲವಡಿ ದೂರವಿರುವ ವಸ್ತುಗಳೂ ಕಾಣುವುದಿಲ್ಲ. ಕಾರಣ, ಅವರ ಕಣ್ಣುಗಳು ಬೆಳಕನ್ನು ಸರಿಯಾಗಿ ಕೇಂದ್ರೀಕರಿಸಲು ಹೆಣಗುವುದೇ ಆಗಿದೆ. ಇದಕ್ಕೆ ಕಾರಣವೆಂದರೆ ನಮ್ಮ ಕಣ್ಣಿನ ಮಸೂರದ (Lens – ಕಣ್ಣು ಗುಡ್ಡೆಯ ಹಿಂದಿರುವ ಪಾರದರ್ಶಕ ಭಾಗ) ರಚನೆಯಲ್ಲಿರುವ ದೋಷವೇ ಹೊರತು ಮತ್ತೊಂದಲ್ಲ.

ನಮ್ಮ ಕಣ್ಣುಗುಡ್ಡೆಗಳು ಬಹಳ ಉದ್ದಕ್ಕಿವೆ (Hyperopia). ಹೀಗಾಗಿ ನಾವು ನೋಡುವ ದೃಶ್ಯಗಳ ಫೋಕಸ್ ಕಣ್ಣಿನ ಹಿಂದಿರುವ ಪಾರದರ್ಶಕ ಮಸೂರವನ್ನು ತಲುಪುವ ಮೊದಲೇ ಕೇಂದ್ರೀಕೃತವಾಗಿ, ಕಣ್ಣಿನ ಪರದೆಯನ್ನು ತಲುಪದೆ ಹೋಗುತ್ತವೆ. ಮತ್ತೆ ಈ ಪ್ರಯತ್ನ ನಡೆಯುತ್ತದಾದರೂ ರೆಟಿನಾವನ್ನು ತಲುಪುವ ಮೊದಲೇ ಮತ್ತೆ ಅವು ಕೇಂದ್ರೀಕೃತಗೊಂಡು ಮಸೂರವನ್ನು ತಲುಪದಾಗುತ್ತವೆ.

'ದೂರದೃಷ್ಟಿ'ಯ ಸಮಸ್ಯೆಯೂ ಕಣ್ಣಿನ ವಿನ್ಯಾಸ ರಚನೆಯ ಮತ್ತೊಂದು ದೋಷದ ಕಾರಣವಾಗಿಯೇ ಉಂಟಾಗುತ್ತದೆ. ಇದು ಹತ್ತಿರದ ದೃಷ್ಟಿಯ ವಿರುದ್ಧ ಸಮಸ್ಯೆ. ಅಂದರೆ ಈ ಸಮಸ್ಯೆ ಉದಯಿಸುವುದು ಕಣ್ಣಿನ ಗುಡ್ಡೆಯ ಉದ್ದ ಸಾಕಾಗದ ಕಾರಣ (Presbyopia) ರೆಟಿನಾವನ್ನು ತಲುಪುವ ಮುನ್ನ ಬೆಳಕಿಗೆ ಕೇಂದ್ರೀಕೃತವಾಗಲು ಸಾಧ್ಯವಾಗುವುದಿಲ್ಲ. ಇದು ವಯಸ್ಸಾಗುವಿಕೆಯ ಕಾರಣ ಉಂಟಾಗುವ ಸಮಸ್ಯೆ. ಕಣ್ಣಿನ ಮಸೂರ ವಯಸ್ಸಾದಂತೆಲ್ಲ ತನ್ನ ಹಿಗ್ಗುವಿಕೆಯ ಗುಣವನ್ನು ಕಳೆದುಕೊಳ್ಳುತ್ತದೆ. ಜೊತೆಗೆ ಈ



**ವಿಕಸನ ಕ್ರಿಯೆಗೆ ಸಂಬಂಧಿಸಿದಂತೆ ನಮಗೂ ಮತ್ತು ಪ್ರಾಣಿಗಳಿಗೂ ವ್ಯತ್ಯಾಸವೊಂದಿದೆ. ಮನುಷ್ಯ ಈ ದೋಷಗಳನ್ನು ಸರಿಪಡಿಸಲು ಅಥವಾ ಆಯುಷ್ಯವನ್ನು ಮುಂದೂಡಲು ವಿಕಸನ ಕ್ರಿಯೆಗೆ ಕಾಯದೆ ಕವಲುಹಾದಿ ಹಿಡಿದಿದ್ದಾನೆ.**